ದಿನಾಂಕಃ 17-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀಸವಾಲು ಪ್ರತಿವಾದಿ 1 ರವರ ಪರ ವಕೀಲರಾದ ಶ್ರೀ. ಟಿ ಎನ್ ಎಸ್ ವಕೀಲರಿಂದಃ

ವೆಂಕಟೇಶ್ ರವರ ಹೆಂಡತಿ ಭಾಗ್ಯಲಕ್ಷ್ಮೀ ಎಂದರೆ ನಾನು. ಲತಾ ವೆಂಕಟೇಶ್ ಎಂದರೆ ನನ್ನ ಮಗಳು. ರೇಖಾ ವೆಂಕಟೇಶ್ ನನ್ನ ಮಗಳು. ವಾದಿ ಪಾರ್ವತಮ್ಮನ ಮಗಳು. ಪಾರ್ಥಸಾರತಿ ನನ್ನ ತಮ್ಮ. ವೆಂಟರಮಣಪ್ಪ ಗೊತ್ತಿರುವುದಿಲ್ಲ. ನನ್ನ ಯಜಮಾನರಿಗೆ ತಮ್ಮ ಇರುವುದಿಲ್ಲ. ನನ್ನ ಯಜಮಾನರ ತಂದೆಯ ಹೆಸರು ಸುಬ್ಬರಾಯಪ್ಪ. ನಾರಾಯಣಸ್ವಾಮಿ ರವರ ಮಗ ಎನ್ ವೆಂಕಟರಮಣಪ್ಪ ಗೊತ್ತಿರುವುದಿಲ್ಲ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನನ್ನ ಗಂಡ ಮೃತಪಟ್ಟಿದ್ದು ಅವರ ವಾರಸುದಾರರು ನಾನು ಅಂತಾ ಹೇಳಿ ದಾವೆಯಲ್ಲಿ ವಕೀಲರ ಮೂಲಕ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಗಳ ಮೇಲೆ ವಾದಿಯೂ ಹಾಕಿರುವುದನ್ನು ಹೊರತು ಪಡಿಸಿ ನೀವು ನಿಮ್ಮ ಗಂಡ ಬೇರೆ ಎಲ್ಲಿಯೂ ದಾವೆ ಹಾಕಿರುವುದು ನನಗೆ ನೆನಪಿರುವುದಿಲ್ಲ. ದಾವಾ ಆಸ್ತಿಗಳ ಮೇಲೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು ಸತ್ಯಾಂಶ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲೆ ಇನ್ನೂ ಆ ದಾವೆ ಇತ್ಯರ್ಥದಲ್ಲಿದೆ ಎಂದರೆ ಗೊತ್ತಿರುವುದಿಲ್ಲ. ನಾನು ಸಲ್ಲಿಸಿರುವ ದಾಖಲೆಗಳನ್ನು ವಾದಿ ನೀಡಿರುತ್ತಾರೆ. ದಾಖಲೆಗಳನ್ನು ಕೊಟ್ಟ ತುಂಬಾ ದಿನಗಳಾಗಿರಬಹುದು ನನಗೆ ಜ್ಞಾಪಕ ಇರುವುದಿಲ್ಲ. ಆ ದಾಖಲೆಗಳಲ್ಲಿ ಏನೂ ಬರೆದಿರುತ್ತದೆ ಅಂತಾ ಓದಿ ಅಥವಾ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ನಾನು ಹಾಜರು ಪಡಿಸಿರುವ ದಾಖಲೆಗಳು ಯಾವುದೂ ಅಂತಾ ಗೊತ್ತಿರುತ್ತದೆ. ಆ ದಾಖಲೆಗಳಲ್ಲಿ ಏನು

ಬರೆದಿರುತ್ತಾರೆ ಅಂತಾ ಓದಿರುತ್ತೇನೆ. ಅದರಲ್ಲಿ ಎನು ಬರೆದಿರುತ್ತದೆ ಅಂತಾ ಗೊತ್ತಿರುತ್ತದೆ. ನಿಪಿ 24 ರಿಂದ 43 ದಾಖಲೆಗಳು ಮಂಜುಳ ರವರಿಗೆ ಯಾರು ಕೊಟ್ಟಿರುತ್ತಾರೆ ಯಾವಾಗ ಕೊಟ್ಟಿರುತ್ತಾರೆ ಅಂತಾ ತಿಳಿದುಕೊಂಡಿರುವುದಿಲ್ಲ. ಮಂಜುಳ ರವರು ಸಾಕ್ಷ್ಯ ವಿಚಾರಣೆ ಇರುವಾಗ ಆ ದಾಖಲೆಗಳನ್ನು ಯಾಕೆ ಕೊಟ್ಟಿರುವುದಿಲ್ಲ ಅಂತಾ ಕೇಳಿ ತಿಳಿದುಕೊಂಡಿರುವುದಿಲ್ಲ. ನಿಪಿ 24 ರಿಂದ 43 ದಾಖಲೆಗಳನ್ನು ಸೃಷ್ಟಿಸಿಕೊಂಡಿರುವುದರಿಂದ ಮಂಜುಳ ರವರು ಸಾಕ್ಷ್ಯವಿಚಾರಣೆ ಮಾಡುವಾಗ ಕೊಟ್ಟಿರುವುದಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಂಜುಳಾ ರವರ ಮದುವೆ ಯಾವಾಗ ಆಗಿರುತ್ತದೆ ಅಂತಾ ನೆನಪಿರುವುದಿಲ್ಲ. ಶ್ರೀನಿವಾಸಯ್ಯ ರವರು ಯಾವಾಗ ಮೃತಪಟ್ಟಿರುತ್ತಾರೆ ಎಂದರೆ 2019 ನೇ ಫೆಬ್ರವರಿಯಲ್ಲಿ ಮೃತ ಪಟ್ಟಿರುತ್ತಾರೆ. ತಾರೀಖು ನೆನಪಿರುವುದಿಲ್ಲ. ಪಾರ್ವತಮ್ಮ ನವರು ಕೊನೆಯದಾಗಿ ಬರೆಯಿಸಿರುವ ವಿಲ್ 2012 ನೇ ಆಗಸ್ಟ್ ನಲ್ಲಿ ಬರೆಯಿಸಿದ್ದು ತಾರೀಖು ನೆನಪಿರುವುದಿಲ್ಲ. ನಾನು ಕೊನೆಯ ವಿಲ್ ನ್ನು ನೋಡಿರುವುದಿಲ್ಲ ಹಾಗೂ ಓದಿರುವುದಿಲ್ಲ ನನ್ನ ಅಕ್ಕ ಹೇಳಿರುತ್ತಾರೆ. ಕೊನೆಯ ವಿಲ್ ನ್ನು ಬರೆಯಿಸಿದಾಗ ನಾನು ಇರುತ್ತೇನೆ. ಆದರೆ ನೋಡಿರುವುದಿಲ್ಲ. ಆ ವಿಲ್ ಗೆ ಮಂಜುನಾಥ ಮತ್ತು ಅಭಿನಂದನ್ ಎನ್ನುವರು ನನ್ನ ಮುಂದೆ ಸಹಿ ಹಾಕಿದರು. ವಿಲ್ ಬರೆಯಿಸುವಾಗ ಯಾವ ದಾಖಲೆ ಕೊಟ್ಟಿರುತ್ತಾರೆ ಅಂತಾ ನಾನು ನೋಡಿರುವುದಿಲ್ಲ. ವಿಲ್ ನ್ನು ಬರೆಯುವಾಗ ನಾನು ಇದ್ದೆ. ಯಾವ ಸ್ಟಾಂಪ್ ಪೇಪರ್ ಮೇಲೆ ಬರೆದಿರುತ್ತಾರೆ ಅಂತಾ ನಾನು ನೋಡಿರುವುದಿಲ್ಲ. ಅದರಲ್ಲಿ ಏನು ಬರೆದಿತ್ತಾರೆ ಅಂತಾ ನಾನು ನೋಡಿರುವುದಿಲ್ಲ. ಇದುವರೆಗೂ ನಾನು ಆ ವಿಲ್ ನ್ನು ಯಾರು ಬರೆದಿರುತ್ತಾರೆ ಎನು ಬರೆದಿರುತ್ತಾರೆ ಅಂತಾ ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ಅಕ್ಕ ವಿಲ್ ನ್ನು ಬರೆಯುವಾಗ ಯಾರಿಗೆ ಹೇಳಿ ಬರೆಯಿಸಿರುತ್ತಾರೆ ಅಂತಾ ಗೊತ್ತಿರುವುದಿಲ್ಲ. ಮಂಜುನಾಥ ಮತ್ತು ಅಭಿನಂದನ್ ರವರ ನನ್ನ ಅಕ್ಕನಿಗೆ ಗೊತ್ತಿದ್ದು ಅವರು ಯಾರು ಅಂತಾ ನನಗೆ ಗೊತ್ತಿರುವುದಿಲ್ಲ. ಅದೇ ಮೊದಲ ಬಾರಿಗೆ ಆ ವ್ಯಕ್ತಿಗಳನ್ನು ನೋಡಿರುತ್ತೀರಾ ಎಂದರೆ

ಗೊತ್ತಿಲ್ಲ. ಮಂಜುಳ ಮನೆಗೆ ಬಂದು ಹೋಗುವವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಿಲ್ ನೊಂದಾಣಿ ಆಗಿದೆಯೋ , ಇಲ್ಲವೋ ಅಂತಾ ಗೊತ್ತಿರುವುದಿಲ್ಲ. ಪಾರ್ಥಸಾರತಿ ನನ್ನ ಅಕ್ಕನಿಗೆ ಮೋಸ ಮಾಡಿ ವಿಲ್ ಬರೆಯಿಸಿರುವ ಬಗ್ಗೆ ನನಗೆ ನನ್ನ ಅಕ್ಕ ಹೇಳಿರುತ್ತಾರೆ. ನನ್ನ ಅಕ್ಕ ಕೊನೇಯ ವಿಲ್ ನ್ನು ಬರೆಯುವುದಕ್ಕಿಂತ ಮುಂಚೆ ಎಷ್ಟು ದಿವಸಕ್ಕಿಂತ ಮುಂಚೆ ಪಾರ್ಥಸಾರತಿ ಮೋಸ ಮಾಡಿ ವಿಲ್ ನ್ನು ಬರೆಯಿಸಿಕೊಂಡಿರುತ್ತಾರೆ ಅಂತಾ ನಿಮಗೆ ತಿಳಿಸಿರುತ್ತಾರೆ ಎಂದರೆ ಮೇ ತಿಂಗಳಲ್ಲಿ ಎಂದು ನುಡಿಯುತ್ತಾರೆ. ನನ್ನ ಅಕ್ಕ ಪಾರ್ಥಸಾರತಿ ರವರಿಗೆ ಬರೆದುಕೊಟ್ಟ ವಿಲ್ ನ್ನು ರದ್ದು ಪಡಿಸಲು ಯಾವ ಪ್ರಯತ್ನ ಪಟ್ಟಿರುತ್ತಾರೆ ಅಂತಾ ಗೊತ್ತಿರುವುದಿಲ್ಲ . ಸಾಕ್ಷಿಯು ಮುಂದುವೆರದು ನನ್ನ ಅಕ್ಕನಿಗೆ ಉಷಾರಿರಲಿಲ್ಲ. ನಿಮ್ಮ ಅಕ್ಕನಿಗೆ ಯಾವ ತಿಂಗಳಿನಿಂದ ಉಷಾರಿರಲಿಲ್ಲ ಎಂದರೆ ತುಂಬಾ ಒಂದು ವರ್ಷಚೆ ಆರು ತಿಂಗಳಿನಿಂದ ಉಷಾರಿರಲಿಲ್ಲ. ಕೊನೆಯ ವಿಲ್ ಮಾಡುವುದಕ್ಕಿಂತ ಮುಂಚೆ ಉಷಾರಿರಲಿಲ್ಲವೋ ಅಥವಾ ಮೇ ತಿಂಗಳಿನಿಂದ ಉಷಾರಿರಲಿಲ್ಲವೋ ಎಂದರೆ ಅದಕ್ಕಿಂತ ಮುಂಚೆ ಇಂದ ಉಷಾರಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಅಕ್ಕನಿಗೆ ಮೊದಲಿನಿಂದಲೂ ಉಷಾರಿರಲಿಲ್ಲ ಎಂಬುದನ್ನು ಮಂಜುಳಾ ರವರು ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿರಬಹುದು ನನಗೆ ಗೊತ್ತಿರುವುದಿಲ್ಲ.

ದಿಃ **24-06-2011** ರಂದು ಪಾರ್ವತಮ್ಮ , ಮಂಜುಳ , ಲತಾ , ರೇಖಾ ಮತ್ತು ಪ್ರತಿವಾದಿ ಯವರ ಮಗಳು ಅಶ್ವಿನಿ ರವರಿಗೆ ದಾವಾ ಸ್ವತ್ತನ್ನು ವಿಲ್ ಮಾಡಿರುವ ಬಗ್ಗೆ ನನಗೆ ತಿಳಿಸಿರುವುದಿಲ್ಲ. ನಿಮ್ಮ ಅಕ್ಕ ವಿಲ್ ನ್ನು ಅದೇ ನೊಂದಾಯಿಸಿ ನಂತರ ಅದೇ ದಿನ ದಿಃ **24-06-2011** ರ ವಿಲ್ ನ್ನು ರದ್ದು ಪಡಿಸಿರುವ ವಿಚಾರವನ್ನು ನನಗೆ ಹೇಳಿರುವುದಿಲ್ಲ. ಆ ದಿವಸ ಎಷ್ಟು ದಾಖಲೆಗಳು ನೊಂದಾವಣೆಯಾಗಿರುತ್ತದೆ ಅಂತಾ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,
ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ., ಚಿಂತಾಮಣಿ.

ಚಿಂತಾಮಣಿ.